ದಿನಾಂಕಃ 06-02-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ವಾದಿ ಪರ ವಕೀಲರಾದ ಶ್ರೀ. ಐ ಎಸ್ ಡಿ ವಕೀಲರಿಂದ

ಶ್ರೀನಿವಾಸಯ್ಯನವರು ಸಬ್ ರಿಜಿಸ್ಟ್ರಾರ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1998 ರಿಂದ ಪರಿಚಯಸ್ಥರಿರುತ್ತಾರೆ. ನಿಪಿ.14 ರ ಪೋಟೋದಲ್ಲಿ ಇರುವವರೇ ಶ್ರೀನಿವಾಸಯ್ಯ ಅವರ ಹೆಂಡತಿ ಪಾರ್ತಮ್ಮ ಮತ್ತು ಅವರ ಮಗಳು ಮಂಜುಳ ಎಂದರೆ ಸರಿ. ಅವರ ಮಗಳನ್ನು ಮದುವೆ ಮಾಡಿಕೊಟ್ಟ ಬಗ್ಗೆ ಗೊತ್ತಿಲ್ಲ. ಅವರ ಮಗಳನ್ನು ಚಿಂತಾಮಣಿಯಲ್ಲಿ ಓದಿಸುತ್ತಿರುವ ವಿಚಾರ ಗೊತ್ತಿರುತ್ತದೆ. ಅವರ ಮಗಳನ್ನು ಮದುವೆ ಮಾಡಿ ಕೊಟ್ಟ ನಂತರ ವಿದೇಶದಲ್ಲಿ ಮಂಜುಳ ಮತ್ತು ಪ್ರಸಾದ್ ಅಲ್ಲೆ ಉಳಿದಿರುತ್ತಾರೆ ಎಂದರೆ ಗೊತ್ತಿಲ್ಲ. ಮಂಜುಳ ರವರ ಮದುವೆಯಾಗುವವರೆಗೆ ಅವರನ್ನು ಇಲ್ಲೆ ಓದಿಸಿ ಬೆಳೆಸಿರುವ ಬಗ್ಗೆ ಗೊತ್ತಿರುತ್ತದೆ ಎಂದರೆ ಗೊತ್ತಿರುತ್ತದೆ.

ಶ್ರೀನಿವಾಸಯ್ಯನವರು ಅವರ ಹೆಂಡತಿ ಮತ್ತು ಮಗಳನ್ನು ಬಿಟ್ಟು ತೀರಿಕೊಂಡ ಬಗ್ಗೆ ಗೊತ್ತು. ಶ್ರೀನಿವಾಸಯ್ಯನವರು ಸತ್ತ ನಂತರ ಅವರ ಹೆಂಡತಿ ಪಾರ್ವತಮ್ಮ ತೀರಿಕೊಂಡಿರುವ ವಿಚಾರ ಗೊತ್ತಿರುತ್ತದೆ. ಶ್ರೀನಿವಾಸಯ್ಯನವರು ಸರ್ಕಾರ ನೌಕರರಾದ್ದರಿಂದ ಅವರಿಗೆ ಪಿಂಚಣಿ ಬರುತ್ತಿತ್ತು ಎಂದರೆ ಸರಿ. ಅವರು ಸತ್ತ ನಂತರ ಪಿಂಚಣಿ ಅವರ ಹೆಂಡತಿ ಗೆ ಬರುತ್ತಿತ್ತು ಎಂದರೆ ಗೊತ್ತಿಲ್ಲ. ಪಾರ್ತಮ್ಮನಿಗೆ ಸ್ವಂತ ಮನೆ ಇದ್ದು ಬಾಡಿಗೆ ಬರುತ್ತಿತ್ತು ಎಂದರೆ ಹೌದು. ಆರ್ಥಿಕವಾಗಿ ಅವರು ಚೆನ್ನಾಗಿ ಇದ್ದರು ಎಂದರೆ ಸರಿ.

ತಮ್ಮ ಪ್ರಕಾರ ಮರಣ ಶಾಸನ ನೊಂದಣಿಯಾಗಿರಬಹುದು ಅಥವಾ ಅಗದೇ ಇರಬಹುದು ಎಂದರೆ ಹೌದು. ನಿಪಿ.6 ಪಾರ್ವತಮ್ಮ ನವರ ಕೊನೆ ಮರಣ ಶಾಸನ ಎಂದರೆ ಸರಿ. ಮರಣ ಶಾಸನ ತೀರಿ ಹೋದ ನಂತರ ಕಾನೂನಿನ ಪ್ರಕಾರ ನೊಂದಣಿ ಮಾಡಿಸಿಕೊಳ್ಳಬಹುದು ಎಂದರೆ ಸರಿ. ತಾವು ಬರಹಗಾರರಾಗಿದ್ದು ಎಷ್ಟು ವರ್ಷಕ್ಕೊಮ್ಮೆ ಪರವಾನಗಿಯನ್ನು ರಿನಿವಲ್ ಮಾಡಿಸುತ್ತೀರಿ ಎಂದರೆ ವರ್ಷಕ್ಕೊಮ್ಮೆ. ತಾವು ಯಾವುದೇ ಪತ್ರವನ್ನು ಬರೆದರೆ ಅದರ ಬಗ್ಗೆ ರಿಜಿಸ್ಟರ್ ಪಾಲಿಸಬೇಕು ಎಂದರೆ ಸರಿ

ರಿನಿವಲ್ ಮಾಡಿಸುವ ಪೂರ್ವದಲ್ಲಿ ಅದನ್ನು ತೋರಿಸಿದರೆ ಮಾತ್ರ ರಿನಿವಲ್ ವಾಡುತ್ತಾರೆ ಎಂದರೆ ಹೌದು. 2012 ನೇ ಇಸ್ವಿಯಲ್ಲಿ ಪುಸ್ತಕವನ್ನು ನೋಡಿದರೆ ಯಾವ ಯಾವ ರಿಜಿಸ್ಟರ್ ಮಾಡಿದ್ದೇನೆ ಅಂತ ನೋಡಬಹುದು ಎಂದರೆ ಹೌದು. ಅದನ್ನು ನೋಡದೆ 2012 ರಲ್ಲಿ ಯಾರದ್ದು ನೊಂದಣಿ ಮಾಡಿಸುತ್ತೇನೆ ಅಂತ ಹೇಳಲು ಆಗುವುದಿಲ್ಲ ಎಂದರೆ ಹೌದು. ಯಾವುದಾದರೂ ದಾಖಲೆ ರಿಜಿಸ್ಟರ್ ಮಾಡಿಸಿದರೆ ಡೀಡ್ ರೈಟರ್ ಬರೆದು ಸಹಿ ಹಾಕಬೇಕು ಎಂದರೆ ಸರಿ. ಕೆಲವು ಪರವಾನಗಿ ಇಲ್ಲದವರು ಅದನ್ನು ಬರೆದು ಪರವಾನಗಿ ಇರುವವರ ಬಳಿ ಸಹಿ ಮಾಡಿಸಿಕೊಂಡು ಹೋಗುತ್ತಾರೆ ಎಂದರೆ ಅವರ ಅನುಮತಿ ಪಡೆದು ಸಹಿ ಮಾಡಿಸಿಕೊಳ್ಳಬಹುದು. ಅದೇ ರಿತೀ ತಾವು ಬೇರೆಯವರಿಗೆ ಸಹಾಯ ಮಾಡಿರಬಹುದು ಎಂದರೆ ಮಾಡಿರುವುದಿಲ್ಲ.

ನಿಮ್ಮ ನೊಂದಣಿ ಕಾಯ್ದೆ ಪ್ರಕಾರ ನೀವು ನಿಗದಿತ ರೀತಿಯಲ್ಲಿ ಪಾಂಟ್ ಮತ್ತು ಸ್ಪೇಸ್ ಬಿಡಬೇಕು ಎಂದರೆ ಸರಿ. ಪಾರ್ಥಸಾರಥಿ ರವರು ಅಷ್ಟು ಪರಿಚಯ ಇರುವುದಿಲ್ಲ. ಪಾರ್ಥಸಾರಥಿ ರವರನ್ನು ನೋಡಿರಬಹುದು ಪರಿಚಯ ಇರುವುದಿಲ್ಲ. ಪಾರ್ಥಸಾರಥಿ ರವರು ಪಾರ್ವತಮ್ಮ ನವರ ತಮ್ಮ ಗೊತ್ತ ಎಂದರೆ ಗೊತ್ತು. ಪಾರ್ಥಸಾರಥಿ ರವರು ಗ್ರಾನೇಟ್ ಬಿಜಿನಸ್ ಮಾಡುತ್ತಿರುವ ಬಗ್ಗೆ ಮಾಹಿತಿ ಇರುವುದಿಲ್ಲ. ಈ ದಾವೆಯಲ್ಲಿ ಸಮನ್ಸ ಅನ್ನು ಯಾರು ತಂದು ಕೊಟ್ಟಿರುತ್ತಾರೆ ಎಂದರೆ ನ್ಯಾಯಾಲಯದಿಂದ ತಂದು ಕೊಟ್ಟಿರುತ್ತಾರೆ ಅವರ ಹೆಸರು ಗೊತ್ತಿರುವುದಿಲ್ಲ. ಸಮನ್ಸ್ ಬಂದ ತಕ್ಷಣ ನನ್ನ ಬುಕ್ ನಲ್ಲಿ ಯಾವುದು ಏನು ಅಂತ ತಿಳಿದುಕೊಂಡಿರುತ್ತೇನೆ. ನಂತರ ಪಾರ್ಥಸಾರಥಿ ರವರನ್ನು ಬೇಟಿಯಾಗಿರುತ್ತೇನೆ. ಪಾರ್ಥಸಾರಥಿ ರವರನ್ನು ಬೇಟಿಯಾದಾಗ ವಕೀಲ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಇಲ್ಲ ಇಲ್ಲೇ ಬೇಟಿಯಾಗಿರುತ್ತೇನೆ. ಅವರ ವಕೀಲರು ಇದರಲ್ಲಿ ಸಾಕ್ಷ್ಯ ಕೊಡಬೇಕು ಅಂತ ಹೇಳಿರುತ್ತಾರೆ ಎಂದರೆ ಇಲ್ಲ ಬರಹಗಾರರಾದ ಕಾರಣ ಕೊಡುತ್ತಿದೆದೇನೆ. ಅವರು ಪ್ರಮಾ ಣಪತ್ರವನ್ನು ತಯಾರಿಸಿದ್ದು ಸಹಿ ಮಾಡಿರುತ್ತೇನೆ ಕೋಳಿದಾದ ನಂತರ ಪ್ರಮಾಣ ಣ ಪತ್ರ ತಯಾರಿಸಿರುತ್ತಾರೆ ಅದನ್ನು ಅವರ ಅಫೀಸ್ ನಲ್ಲಿ ಯಾರು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರಮಾಣ ಪತ್ರದಲ್ಲಿ ಬರೆದಿರುವ ದಾಖಲೆಗಳನ್ನು ನೀವು ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಮಾಡಿರುತ್ತೇನೆ. ದಿ:19-5-12 ರಲ್ಲಿ ಆ ದಾಖಲೆ ನಮೂದು ಇದೆಯಾ ಇಲ್ಲವೊೀ ಅಂತ ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ. ಅದರ

ಪ್ರತಿಯನ್ನು ಮತ್ತು ಪುಸ್ತಕವನ್ನು ವಕೀಲರಿಗೆ ತೋರಿಸಿರುವುದಿಲ್ಲ ಮತ್ತು ಕೊಟ್ಟಿರುವುದಿಲ್ಲ. ತಾವು ಪರಿಶೀಲನೆ ಮಾಡಿದಾಗ ಒಂದು ಕ್ರಯದ ಕರಾರರು ಮತ್ತು ಮರಣ ಶಾಸನ, ಮರಣ ಶಾಸನ ರದ್ದು ಪಡಿಸಿದ ಬಗ್ಗೆ ನಮೂದು ಇರಲಿಲ್ಲ ಎಂದರೆ ಸರಿ. 2012 ನೇ ಇಸ್ವಿಯ ಪ್ರತಿಯೂ ಕೂಡ ನಿಮ್ಮ ಬಳಿ ಇರಲಿಲ್ಲ ಎಂದರೆ ಇಲ್ಲ. ವಕೀಲ ಬಳಿ ಹೆಳಿ ಅದರ ಪ್ರತಿಯನ್ನು ನಾನು ಪಡೆದಿರುವುದಿಲ್ಲ. ವಿಲ್ ಇದ್ದರೆ ವಿಲ್ ರದ್ದು ಆಗುವ ಮೋದಲೇ ಇನ್ನೊಂದು ವಿಲ್ ಮಾಡುವಂತಿಲ್ಲ ಎಂದರೆ ಹೌದು.

ನಿಡಿ-2 ವಿಲ್ 3 ಗಂಟೆ 16 ನಿಮಿಷಕ್ಕೆ ಆಗಿದೆ ಎಂದರೆ ಸರಿ. ವಿಲ್ ರದ್ದಿಯಾತಿ ಪತ್ರ 3 ಗಂಟೆ 22 ಕ್ಕೆ ಆಗಿದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೀಡುವಾಗ ಹಿಂದೆ ಮುಂದೆ ಆಗಿರುತ್ತದೆ. ಈ ದಾವೆಯಲ್ಲಿ ಮೊದಲು ವಿಲ್ ಮಾಡಿದ ನಂತರ ಮಿಲ್ ರದ್ದಿಯಾತಿ ಆಗಿದೆ ಎಂದರೆ ಹೌದು. ಅದು ತಪ್ಪಾಗಿದೆ ಎಂದರೆ ಸರಿ. ದಿಃ19-05-12 ರ ವಿಲ್, ರದ್ದಿಯಾತಿ ವಿಲ್ ಅನ್ನು ನೋಡಿದರೆ ಅದರಲ್ಲಿ ಇರುವ ಪಾಂಟ್ ಮತ್ತು ಸ್ಪೇಸ್ ನೋಡಿದರೆ ಗೊತ್ತಾಗುತ್ತದೆ. ನಿಡಿ-1, 2, 6 ದಾಖಲೆ ನೋಡಿದರೆ ಗೊತ್ತಾಗುತ್ತದೆ ಎಂದರೆ ಹೌದು. ನಿಡಿ-1 ಅದರಲ್ಲಿ ಇರುವ ಪಾಂಟ್, ಲೈನ್, ಸ್ಪೇಸ್ ಅದೇ ರೀತಿ ನಿಡಿ-2 ಮತ್ತು ನಿಡಿ-6 ರಲ್ಲಿ ಇರುವ ಲೈನ್ ಸ್ಪೇಸ್ ಬಿನ್ನ ಎಂದರೆ ಹೌದು. ಸಾಕ್ಷಿ ಮುಂದುವರಿದು ನಿಡಿ-1 ವಿಲ್ ರದ್ದಿಯಾತಿ ಪತ್ರ ಸಿಂಗಲ್ ಲೈನ್ ತೆಗೆದುಕೊಂಡರೆ ಸಾಕ್ಷಿದಾರರ ಸಹಿಗೆ ತೊಂದರೆಯಾಗುತ್ತದೆ ಅಂತ ಒಂದೂವರೆ ಲೈನ್ ಸ್ಪೇಸ್ ತೆಗೆದುಕೊಂಡಿರುತ್ತೇವೆ. ನೊಂದಣಿ ಕಾಯ್ದೆ ಪ್ರಕಾರ ಎಷ್ಟು ಲೈನ್ ಸ್ಪೇಸ್ ಬಿಡಬೇಕು ಅಷ್ಟು ಬಿಟ್ಟಿರುತ್ತೀರಿ ಎಂದರೆ ಹೌದು.

ಪಾರ್ವತಮ್ಮ ನವರಿಗೆ ಓದಲು ಬರೆಯಲು ಬರುತ್ತಿರಲಿಲ್ಲ ಎಂದರೆ ಅದ ಬಗ್ಗೆ ಗೊತ್ತಿವುದಿಲ್ಲ ಸಹಿ ಹಾಕುತ್ತಿದ್ದರು. ಅಮ ಅಕ್ಷರಸ್ಥರಾಗಿರಲಿಲ್ಲ ಎಂದರೆ ಅಲ್ಪ ಸ್ವಲ್ಪ ಓದುತ್ತಿದ್ದರು. ತಮಗೆ ಗೊತ್ತಿರುವ ಹಾಗೆ ಪದವನ್ನು ಪಾರ್ವತಮ್ಮ ನವರು ಸೇರಿ ಓದುತ್ತಿದ್ದರು ಎಂದರೆ ಪತ್ರ ಮಾಡುವಾಗ ಓದಿ ಹೇಳಿರುತ್ತೇನೆ ಪತ್ರವನ್ನು ಓದಲು ಸಮಯವಾಗುತ್ತದೆ ಅಂತ ಓದಿರುವುದಿಲ್ಲ ಎಂದರೆ ನಾನು ಪತ್ರವನ್ನು ಓದಿ ಹೇಳಿರುತ್ತೇನೆ. ದಿಃ19-05-12 ರಲ್ಲಿ ಪಾರ್ವತಮ್ಮ ನವರು ಬೆಂಗಳೂರಿನಿಂದ ಬಂದಬಗೆಗ ಗೊತ್ತಿರುವುದಿಲ್ಲ. ದಿಃ19-5-12 ರಲ್ಲಿ ಹುಷಾರಿಲ್ಲದ ಕಾರಣ ಪಾರ್ವತಮ್ಮ ನವರು ಬೆಂಗಳೂರಿನ ಆಸ್ಪತ್ರೆಯಲ್ಲಿ ಇದ್ದ ಬಗ್ಗೆ ಗೊತ್ತಿಲ್ಲ. ನಿಡಿ-2 ರಲ್ಲಿ ಪದಗಳು ತುಂಬಾ ಹತ್ತಿರ

ಇದೆ ಎಂರೆ ಹೌದು. ಯಾರಾದರೂ ಬಂದು ಮಾಹಿತಿ ಕೊಟ್ಟರೆ ಅವರರ ಮೊಬೈಲ್ ತೆಗೆದುಕೊಂಡು ಬರೆಸುತ್ತೀರಿ ಎಂದರೆ ಹೌದು. ನಿಡಿ-2 ಮತ್ತು ನಿಡಿ-6 ರಲ್ಲಿ ಮೊಬೈಲ್ ನಂಬರ್ ಬರೆದಿರುತ್ತೀರಿ ಎಂದರೆ ಹೌದು. ಯಾರಾದರೂ ಆರೋಗ್ಯ ಸರಿ ಇಲ್ಲದಿದ್ದರೆ ಅವರ ಕುಟುಂಬಸ್ಥರು ಬಂದು ಮಾಹಿತಿ ಕೊಡಬಹುದು ಎಂದರೆ ಹೌದು. ನಿಡಿ-2 ಮತ್ತು 6 ರಲ್ಲಿ ಪಾರ್ಥಸಾರಥಿ ರವರು ತಮ್ಮ ಮೊಬೈಲ್ ನಂಬರ್ ಬರೆಸಿರುತ್ತಾರೆ ಪಾರ್ವತಮ್ಮನವರು ಬರಲು ಆಗುವುದಿಲ್ಲ ಅಂತ ಅವರ ತಮ್ಮ ಬರೆಯಲು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಮೊಬೈಲ್ ನಂಬರ್ ಕೇಳಿರುತ್ತೇನೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ನಿಡಿ-2 ರಲ್ಲಿ ದಕ್ಷಿಣಕ್ಕೆ ನನ್ನ ಸಹೋದರ ಎಸ್ ವೆಂಕಟೇಶ್ ಅಂತ ಇದೆ ಎಂದರೆ ಹೌದು. ಪಾರ್ವತಮ್ಮ ನವರ ತಮ್ಮ ಎಸ್ ವೆಂಕಟೇಶ್ ಆಗಿರಲಿಲ್ಲ ಎಂದರೆ ಹೌದು ಶ್ರೀನಿವಾಸಯ್ಯನವರ ತಮ್ಮ. ನಿಡಿ-2 ರಲ್ಲಿ ಬರೆಸಿರುವುದು ತಪ್ಪಾಗಿದೆ ಎಂದರೆ ಹೌದು. ನಿಡಿ-1 ಬರೆಸುವ ಮೊದಲು ಯಾವ ಮರಣ ಶಾಸನ ಇತ್ತು ಎಂಬುದನ್ನು ನಾನು ನೋಡಿರುತ್ತೇನೆ. ಅದರ ಪ್ರತಿಯನ್ನು ನೀವು ನೋಡಿರುವುದಿಲ್ಲ ತಮ್ಮ ಬಳಿ ಇಲ್ಲ ಎಂದರೆ ಅದರ ಪ್ರತಿ ನೋಡಿರುತ್ತೇನೆ. ಮೊದಲು ಇದ್ದ ವಿಲ್ ಪಾರ್ವತಮ್ಮನ ಮಗಳು ಮಂಜುಳಾ ಸಿ ವಿ ಅವರ ತಂಗಿಯ ಮಕ್ಕಳು ಲತಾ ಮತ್ತು ರೇಖಾ ರವರಿಗೆ ಮಾಡಿರುತ್ತಾರೆ ಎಂದರೆ ಹೌದು.

ಪಾರ್ಥಸಾರಥಿ ಗೆ ಮತ್ತು ಎನ್ ಜಿ ಸಾಯಿಬಾಬಾ ರವರಿಗೆ ಹಣದ ವ್ಯವಹಾರ ಇತ್ತು ಎಂದರೆ ಗೊತ್ತಿಲ್ಲ. ಪಾರ್ಥಸಾರಥಿ ರವರು ಗ್ಯಾರೆಂಟಿಗಾಗಿ ಸೇಲ್ ಅಗ್ರಿಮೆಂಟ್ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವ್ಯವಹಾರದ ಬಗ್ಗೆ ಗೊತ್ತಿಲ್ಲ ಅಗ್ರಿಮೆಂಟ್ ಮಾಡಿಕೊಂಡಿದ್ದರು. ಪಾರ್ವತಮ್ಮ ನವರು ಅವರ ತಮ್ಮ ಪಾರ್ಥಸಾರಥಿ ರವರಿಗೆ ಅಗ್ರಿಮೆಂಟ್ ರದ್ದು ಮಾಡಿಕೋ ಅಂತ ಒತ್ತಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಕ್ಕಾಗಿ ದಿ:19-12-12 ರಲ್ಲಿ ಅಗ್ರಿಮೆಂಟ್ ರದ್ದು ಮಾಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ದಿನ ತಮಗೆ ಎಷ್ಟು ನೊಂದಣಿ ಇತ್ತು ಎಂದು ನೆನಪಿದೆಯಾ ಎಂದರೆ ಗೊತ್ತಿಲ್ಲ. ಸಾಮಾನ್ಯವಾಗಿ ಡೀಡ್ ರೈಟರ್ ಬರಹ ಮಾಡಿದ್ದು ನೊಂದಣಿಯನ್ನು ಬೇರೆಯವರನ್ನು ಇಟ್ಟುಕೊಂಡು ಮಾಡುತ್ತಾರೆ ಎಂದರೆ ಕೆಲವರು ಮಾಡುತ್ತಾರೆ. ವೈಯುಕ್ತಿಕವಾಗಿ ನೀವು ಹೋಗಿ ನೊಂದಣಿ ಮಾಡಿಸಿಲ್ಲ ಎಂದರೆ ನಾನೇ ಹೋಗಿ ಸಬ್

ಮಿಟ್ ಮಾಡಿರುತ್ತೇನೆ. ಪಾರ್ಥಸಾರಥಿ ರವರು  ನಿಡಿ-1,2,6 ಮೂರು ದಾಖಲೆಗಳನ್ನು ಮಾಡಿಸಲು ಅಸಿಸ್ಟೆಂಟ್ ಇಟ್ಟುಕೊಂಡಿರುತ್ತಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-6 ರಲ್ಲಿ ಮೊದಲೇ ಪುಟ, 2 ನೇ ಪುಟದಲ್ಲಿ ಮತ್ತು 3 ನೇ ಪುಟದಲ್ಲಿ ಪಾರ್ವತಮ್ಮನ ಸಹಿ ಇಲ್ಲ ಎಂದರೆ ಸರಿ.   ನಿಡಿ-1,2,6  ಟೈಪ್ ಆಗಿ ಪ್ರಿಂಟ್ ತೆಗೆದಾಗ ಒಟ್ಟಿಗೆ  ಪಾರ್ವತಮ್ಮನವರ ಸಹಿ ತೆಗೆದುಕೊಂಡಿರುತ್ತೀರಿ ಎಂದರೆ ಹೌದು.  ನಿಡಿ-6 ಮೊದಲು  ನೀವು ನಿಡಿ-2 ಕ್ಕೆ  ಪಾರ್ವತಮ್ಮನ ಸಹಿ ಪಡೆದಿರುತ್ತೀರಿ ಎಂದರೆ ಸುಳ್ಳು ಯಾವುದೇ ವಿಲ್ ಸಹಿ ಆಗಬೇಕಾದರೆ ಸಬ್ ರಿಜಿಸ್ಟ್ರಾರ್  ಮುಂದೆ ಆಗಬೇಕು ಎಂದರೆ ಸರಿ.  ನಿಡಿ-1,2,6 ದಾಖಲೆಗಳಿಗೆ ಸಬ್ ರಿಜಿಸ್ಟ್ರಾರ್ ಮುಂದೆ ಸಹಿ ಆಗಿರುವುದಿಲ್ಲ ಎಂದರೆ ಆಗಿರುತ್ತದೆ. ಆಗ ಸಬ್ ರಿಜಿಸ್ಟ್ರಾರ್ ಯಾರು ಇದ್ದರು ಎಂದರೆ ನೆನಪಿರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಸಬ್ ರಿಜಿಸ್ಟ್ರಾರ್ ಮುಂದೆ ಸಹಿ ಹಾಕಿರುತ್ತಾರೆ ಅಂತ ಬರೆದಿರುವುದಿಲ್ಲ ಎಂದರೆ ಹೌದು. ಆ ದಾಖಲೆಗಳನ್ನು ಮಾಡುವಾಗ ಅವರ ಕುಟುಂಬದ ಬಗ್ಗೆ ಗೊತ್ತಿತ್ತು ಎಂದರೆ ಹೌದು. ಯಾರಾದರೂ ವಿಲ್ ಬರೆಸಬೇಕಾದರೆ ಅವರ ಕುಟುಂಬದ ಸಧಸ್ಯರ  ವಿವರ ಹಾಕುತ್ತಾರೆ ಎಂದರೆ ಸರಿ.  ನಿಡಿ-2 ರಲ್ಲಿ ಅವ ಕುಟುಂದ ಸಧಸ್ಯರ ವಿವರ ಇಲ್ಲ ಎಂದರೆ ಹೌದು.  ಹಾಗೆಯೇ ಅವರದ್ದು ಏನು ಒಡವೆ ಮತ್ತು ಚರ ಮತ್ತು ಸ್ಥಿರಾಸ್ತಿಗಳ ವಿವರ ಬರೆಸುತ್ತಾರೆ ಎಂದರೆ ಹೌದು.  ನಿಡಿ-2 ರಲ್ಲಿ ಯಾವುದೇ ಯಾವುದೇ ಬಂಗಾರದ ಮತ್ತು ಬಳ್ಳಿ ವಸ್ತುಗಳ ವಿವರಣೆ ಬಗ್ಗೆ ಬರೆಸಿರುವುದಿಲ್ಲ ಎಂದರೆ ಹೌದು.  ಪಾರ್ವತಮ್ಮ ನವರು ಮಾಹಿತಿ ಕೊಟ್ಟಿದ್ದರೆ ಚಿನ್ನ ಎಷ್ಟು ಇದೆ ಬೆಳ್ಳಿ ಎಷ್ಟು ಇದೆ ಅಂತ  ಬರೆಸುತ್ತಾರೆ ಎಂದರೆ ಅವರು ಹೇಳಿರುವುದಿಲ್ಲ.  ಆ ರೀತಿ ಚಿನ್ನ ಬಳ್ಳಿ ಇದ್ದರೆ ಅದರ ವಿವರ ಕೇಳಿ ನಮೂದು ಮಾಡುತ್ತೀರಿ ಎಂದರೆ ಹೌದು.  ನಿಡಿ-1 ಗೆ ಪಾರ್ಥಸಾರಥಿ ಮತ್ತು ಮುನಿವೆಂಕಟಪ್ಪ ನವರು ಸಾಕ್ಷಿದಾರರಾಗಿರುತ್ತಾರೆ ಎಂದರೆ ಹೌದು. ಆದರೆ ಸಾಕ್ಷಿದಾರರ ಕಾಲಂ ನಲ್ಲಿ ಪಾರ್ಥಸಾರಥಿ ಮತ್ತು ನಾರಾಯಣಸ್ವಾಮಿ ಅಂತ ಆಗಿದೆ ಎಂದರೆ ಹೌದು. ಯಾರು ಯಾರು ಯಾವ ದಾಖಲೆಗಳಿಗೆ ಸಾಕ್ಷಿದಾರರಾಗಿರುತ್ತಾರೋ ಅವರೇ ಬರಬೇಕು ಎಂದರೆ ಹೌದು. ಗಲಿಬಿಲಿಯಲ್ಲಿ ಅದು ತಪ್ಪಾಗಿರುತ್ತದೆ ಎಂದರೆ ಬೇರೆ ಕಡೆ ಹಾಕುವುದನ್ನು ಇಲ್ಲಿ ಹಾಕಿರುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.